ಕೃಷಿ ವಿಶ್ವವಿದ್ಯಾನಿಲಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು

11-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ವರ್ಗಗಳಲ್ಲಿ 'ಬ್ಯಾಕ್‌ಲಾಗ್' ಹುದ್ದೆಗಳನ್ನು ಕಳೆದ 5 ವರ್ಷಗಳಿಂದ ಎಷ್ಟು ಭರ್ತಿ ಮಾಡಲಾಗಿದೆ ಹಾಗೂ ಭರ್ತಿ ಮಾಡಲಿರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು?

ಆ) ಸದರೀ ವಿಶ್ವವಿದ್ಯಾನಿಲಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಮಯದಲ್ಲಿ ಸರ್ಕಾರದ ಮೀಸಲಾತಿ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ, ಹಾಗಿದ್ದಲ್ಲಿ ಇದುವರೆವಿಗೂ ತುಂಬಿರುವ ಮೀಸಲಾತಿ ಪ್ರಮಾಣವೆಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ ಒಂದು ಬೆಂಗಳೂರಿನಲ್ಲಿ ಮತ್ತೊಂದು ಧಾರವಾಡದಲ್ಲಿ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಳೆದ 5 ವರ್ಷಗಳಲ್ಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳ ವಿವರ :

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಬ್ಯಾಕ್‌ಲಾಗ್ ಹುದ್ದೆಗಳು		ತುಂಬಿರುವ ಹುದ್ದೆಗಳು		ಇನ್ನುಳಿದಿರುವ ಬ್ಯಾಕ್‌ಲಾಗ್ ಹುದ್ದೆ	
		ಪ. ಜಾತಿ	ಪ.ಪಂ.	ಪ. ಜಾತಿ	ಪ. ಪಂ.	ಪ. ಜಾತಿ.	ಪ. ಪಂ.
1.	ಪ್ರಾಧ್ಯಾಪಕರು	9	4	1	-	8	4
2.	ಸಹ ಪ್ರಾಧ್ಯಾಪಕರು	13	16	6	-	7	6
3.	ಸಹಾಯಕಪ್ರಾಧ್ಯಾಪಕರು	37	15	21	1	16	4
4.	ಇನ್‌ಸ್ಪೆಕ್ಟರ್ ಕೇಡರ್ ಸಂಶೋಧನಾ ಸಹಾಯಕ ಹಾಗೂ ವಿಸ್ತರಣಾ ಮಾರ್ಗದರ್ಶಿಗಳನ್ನೊಳ ಗೊಂಡಂತೆ	30	26	13	9	17	17

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಳೆದ 5 ವರ್ಷಗಳಲ್ಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳ ವಿವರ

1)	ಪ್ರಾಧ್ಯಾಪಕರು	9
2)	ಸಹ ಪ್ರಾಧ್ಯಾಪಕರು	19
3)	ಸಹಾಯಕ ಪ್ರಾಧ್ಯಾಪಕರು	65
4)	ಬೋಧಕರು	5
5)	ಬೋಧಕೇತರರು	15

ಸದರೀ ಹುದ್ದೆಗಳಿಗೆ ಸಂದರ್ಶನಗಳನ್ನು ನಡೆಸಲಾಗುತ್ತಿದೆ.

ಆ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಲ್ಲಿ ಮೀಸಲಾತಿ ನಿಯಮಗಳನ್ನು ಪಾಲಿಸುತ್ತಿದೆ. ಇದುವರೆವಿಗೂ ತುಂಬಿರುವ ಮೀಸಲಾತಿ ಪ್ರಮಾಣವು ಈ ಕೆಳಕಂಡಂತಿದೆ.

ಹುದ್ದೆಗಳ ವಿವರ		ಶೇಕಡವಾರು	
		ಪ.ಜಾತಿ	ಪ.ಪಂ.
1.	ಪ್ರಾಧ್ಯಾಪಕರು	5.8	-
2.	ಸಹ ಪ್ರಾಧ್ಯಾಪಕರು	3.8	1.1
3.	ಸಹಾಯಕ ಪ್ರಾಧ್ಯಾಪಕರು	8.3	1
4.	ಶಿಕ್ಷಕರು, ಸಂಶೋಧನಾ ಸಹಾಯಕ ಹಾಗೂ ವಿಸ್ತರಣಾ ಮಾರ್ಗದರ್ಶಿಗಳನ್ನೊಳಗೊಂಡಂತೆ	22.5	3

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ. ಈಗ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಳಿಗೆ ಸಂದರ್ಶನ ನಡೆಸಲಾಗುತ್ತಿದ್ದು, ಬ್ಯಾಕ್‌ಲಾಗ್ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿದೊರೆತಲ್ಲಿ ಎಲ್ಲಾ ಹುದ್ದೆಗಳನ್ನು ತುಂಬಲಾಗುವುದು.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರಡಿಯ ಸಂಘಗಳು

46-ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 31.3.94 ರವರೆಗೆ ರಾಜ್ಯದಲ್ಲಿ ಸೊಸಾಯಿಟೀಸ್ ರಿಜಿಸ್ಟ್ರೇಶನ್ ಅಧಿನಿಯಮದ ಅನ್ವಯ ಜಿಲ್ಲಾವಾರು ಇರುವ ಸಂಘಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ಸಂಘಗಳು 1991-92, 92-93, 93-94 ಸಾಲಗಳ ಬಾಬ್ತು ತಮ್ಮ ಸಂಘದ ಬಾಬ್ತು ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಸರಕಾರಕ್ಕೆ ಸಲ್ಲಿಸಿರುವುದಿಲ್ಲ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು):

ಪಟ್ಟಿ ಲಗತ್ತಿಸಿದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಂಘಗಳ ಸಂಖ್ಯೆ	ಒಟ್ಟು	ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಲ್ಲಿಸದಿರುವ ಸಂಘಗಳ ಸಂಖ್ಯೆ	
			1991-92	1992-93	1993-94
1	2	3	4	5	6
1.	ಬೆಂಗಳೂರು (ಗ್ರಾ)	2,722	2,012	2,187	2,307
2.	ಬೀದರ್	542	147	218	169
3.	ಬಿಜಾಪುರ	3,796	3,748	3,729	3,754
4.	ಬೆಳಗಾಂ,	2,283	1,611	1,794	2.033